**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಧಾರವಾಡ**

**ಎಸ್.ಸಿ. ಸಂಖ್ಯೆ: 14/2023**

ಫ್ರಾಸಾ-02

ಚಾಸಾ-04

| | | |
|---|---|---|
| ಸಾಕ್ಷಿಯ ಹೆಸರು | - | ಮಹಮ್ಮದಹನೀಫ ಯರಗಟ್ಟಿ |
| ತಂದೆಯ ಹೆಸರು | - | ಫಕ್ರುದ್ದೀನಸಾಬ |
| ವಯಸ್ಸು | - | 75 ವರ್ಷ |
| ಉದ್ಯೋಗ | - | ಖಾಸಗಿ ಕೆಲಸ |
| ವಾಸಸ್ಥಳ | - | ಧಾರವಾಡ |
| ಸತ್ಯ ಪ್ರತಿಜ್ಞೆ ಮೇರೆಗೆ, ದಿನಾಂಕ | | 05-03-2026 |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಈ ಕೇಸಿನ ಗೌಸಮೋದಿನ (ಚಾಸಾ-5) ಗೊತ್ತು. ಈಗ 3, 3 ವರೆ ವರ್ಷದ ಹಿಂದೆ ಕೆಲಗೇರಿ ಕೆರೆಯಲ್ಲಿ ಯಾಸಿನ ಎಂಬ ಹುಡುಗ ಕೆರೆಯಲ್ಲಿ ಬಿದ್ದಿದ್ದ ಅವನ ಮೃತ ದೇಹವನ್ನು ತೆಗೆದಿದ್ದರು ಮತ್ತು ಅಲ್ಲಿ ಜಾಗದ ಪಂಚನಾಮೆ ಮಾಡಿದರು. ನಾನು ಮತ್ತು ಗೌಸಮೋದಿನ ಇಬ್ಬರೂ ಕೂಡ ಆ ಸಮಯದಲ್ಲಿ ಅಲ್ಲಿದ್ದೆವು. ಮೃತ ಹುಡುಗನ ತಂದೆ ರಫೀಕಸಾಬ ರೋಟಿವಾಲೆ ಆ ಜಾಗದಲ್ಲಿ ಇದ್ದರು. ಅವರು ಆ ಜಾಗ ತೋರಿಸಿದರು. 2 ನೇ ಮೆಟ್ಟಿಲಿನ ಹತ್ತಿರ ಹೆಣ ಇತ್ತು . ಆ ಜಾಗ ಮೃತನ ತಂದೆ ತೋರಿಸಿದರು. ಆ ಪಂಚನಾಮೆ ಬೆಳಿಗ್ಗೆ 10.30 ರಿಂದ 11.30 ರ ನಡುವೆ ಜರುಗಿತು. ನಾನು ಅದಕ್ಕೆ ಸಹಿ ಮಾಡಿದ್ದೇನೆ. ನನ್ನ ಜೊತೆಗೆ ಇದ್ದ ಗೌಸಮೋದಿನ ಕೂಡ ಸಹಿ ಮಾಡಿದ್ದಾರೆ. ಸಾಕ್ಷಿ ಆ ಮಹಜರದಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಆ ಮಹಜರ ಈಗಾಗಲೇ ನಿಶಾನೆ ಪಿಃ 6 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯಸಹಿಯನ್ನು ನಿಶಾನೆ ಪಿಃ6(ಬಿ) ಎಂದು ಗುರುತಿಸಲಾಗಿದೆ. ನನ್ನ ಸಮಕ್ಷಮ ಗೌಸಮೋದಿನ ರವರು ಕೂಡ ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ಆ ಸಹಿ ಕೂಡ ನೋಡಿ ಗುರುತಿಸಿರುತ್ತಾರೆ ಅದನ್ನು ನಿಶಾನೆ ಪಿಃ 6(ಸಿ) ಎಂದು ಗುರುತಿಸಲಾಗಿದೆ. ನಾನು ಅಲ್ಲಿ ಇದ್ದೆ ಎನ್ನುವುದಕ್ಕೆ ಫೋಟೊ ತೆಗೆದಿದ್ದಾರೆ ಎಂದು ಸಾಕ್ಷಿ ಆ ಫೋಟೊ ನೋಡಿ ಗುರುತಿಸಿರುತ್ತಾರೆ. ಆ ಫೋಟೊ ಈಗಾಗಲೇ ನಿಶಾನೆ ಪಿಃ 7 ಎಂದು ಈಗಾಗಲೇ ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿ ಗುರುತಿಸಿದ ಸಾಕ್ಷಿಯ ಭಾವಚಿತ್ರವನ್ನು

ನಿಶಾನೆ ಪಿಃ 7(ಎ) ಎಂದು ಅದರಲ್ಲಿರುವ ಸಾಕ್ಷಿ ಗುರುತಿಸಿದ ಇನ್ನೊಬ್ಬ ಸಾಕ್ಷಿದಾರರಾದ ಗೌಸಮೋದಿನ ರವರ ಭಾವಚಿತ್ರ ನಿಶಾನೆ ಪಿಃ 7 (ಬಿ) ಎಂದು ಗುರುತಿಸಲಾಗಿದೆ. ( ಆರೋಪಿ ವಕೀಲರು ನಿಶಾನೆ ಪಿಃ 7 ಫೋಟೊಗೆ ಕಲಂ 65 ಬಿ ಪ್ರಮಾಣಪತ್ರ ಕೊಟ್ಟಿಲ್ಲ ಅದನ್ನು ಗುರುತು ಮಾಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ. ಆ ದಾಖಲೆ ಈಗಾಗಲೇ ನಿಶಾನೆ ಪಿಃ 7 ಎಂದು ಗುರುತಿಸಲಾಗಿದೆ. ಆದರೂ ಸಹ ಕಲಂ 65 ಬಿ ಪ್ರಮಾಣಪತ್ರ ಪ್ರಾಸಿಕ್ಯೂಶನ್ ರವರು ಹಾಜರುಪಡಿಸಬೇಕು ಎಂಬ ಶರತ್ತಿನೊಂದಿಗೆ ನಿಶಾನೆ ಪಿಃ 7 (ಎ) ಮತ್ತು (ಬಿ) ಗುರುತಿಸಲಾಗಿದೆ.) ಸಾಕ್ಷಿ ರಫೀಕಸಾಬ ರೋಟಿವಾಲೆ ಮೃತನ ತಂದೆಯ ಫೋಟೊ ನೋಡಿ ಗುರುತಿಸಿರುತ್ತಾರೆ, ಅದನ್ನು ನಿಶಾನೆ ಪಿಃ 7 (ಸಿ) ಎಂದು ಗುರುತಿಸಲಾಗಿದೆ.

**ಪಾಟೀಸವಾಲು ಆರೋಪಿ ಪರ ಶ್ರೀ ಎಸ್ . ಎಸ್.ಎಚ್ ವಕೀಲರಿಂದಃ**

2. ಆ ದಿನ ಪಂಚನಾಮೆಗೆ ಬಾ ಎಂದು ಪೋಲೀಸರು ನಮಗೆ ನೊಟೀಸು ಕೊಟ್ಟಿರಲಿಲ್ಲ. ಆದರೆ ನಾವು ಅಲ್ಲಿಗೆ ನೋಡಲು ಹೋಗಿದ್ದೆವು. ಆಗ ಪೋಲೀಸರು ಪಂಚರಾಗಿ ಸಹಿ ಮಾಡಲು ಹೇಳಿದರು. ಪಂಚನಾಮೆಯಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ದೂರುದಾರರು ಯಾವುದೇ ಸ್ಥಳ ತೋರಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ನಡೆದಿಲ್ಲ ಅಂದರೆ ಸರಿಯಲ್ಲ ಮತ್ತು ಯಾವುದೇ ಫೋಟೊ ತೆಗೆದಿಲ್ಲ ಅಂದರೆ ಸರಿಯಲ್ಲ. ದೂರುದಾರರು ಸ್ಥಳ ತೋರಿಸಿಲ್ಲ ಪೋಲೀಸರು ತೋರಿಸಿದ್ದಾರೆ ಅಂದರೆ ಸರಿಯಲ್ಲ. ಖಾಲಿ ಪೇಪರನಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ಎನೂ ಮಾಹಿತಿ ಇಲ್ಲದಿದ್ದರೂ ಸಹ ಪೋಲಿಸಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಉಕ್ತ ಹೇಳಿಕೆಯ ಮೇರೆಗೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ.

( ಬಿ. ಎಸ್. ಭಾರತಿ )
ಪ್ರಧಾನ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು,

ಎಸ್.ಸಿ. ಸಂಖ್ಯೆ 14/2023
ಪ್ರಾಸಾ.02/ ಚಾಸಾ-04

ಧಾರವಾಡ.